॥ ಶ್ರೀ ಮನೋಹರವಿಠಲ ದಾಸರಂತರ್ಗತ ಶ್ರೀ ಗುರು ರಾಘವೇಂದ್ರಾಂತರ್ಗತ

ಶ್ರೀ ವಾದಿರಾಜಾಂತರ್ಗತ ಶ್ರೀಹನುಮ ಭೀಮ ಮಧ್ವಾಂತರ್ಗತ ಶ್ರೀ ಲಕ್ಷ್ಮೀ ನ್ರರಸಿಂಹಾಯನಮಃ॥

# ॥ ಶ್ರೀಗುರುರಾಘವೇಂದ್ರ ಸ್ತೋತ್ರ ॥

ಶ್ರೀಜನಕಜಾರಮಣನಂತಭಾಸ್ಕರಸೋಮ ।
ತೇಜರಾಜೀವ ಭವಭಯವಿನುತಭಕ್ತಸುರ-।
ಭೂಜಸದ್ಗುಣಸಾಂದ್ರರವಿಕುಲಾಂಬುಧಿಚಂದ್ರರಾಜೇಂದ್ರರಾಘವೇಂದ್ರಾ॥
ರಾಜಿಸುವ ತವ ನಾಮಧರಿಸಿ ಪೂಜಿಸುವ ಗುರು।
ರಾಜ ಮಂತ್ರಾಲಯನಿವಾಸನಮಲಸ್ತೋತ್ರ ।
ರಾಜಿಯೇಂ ವಿರಚಿಸುವೆ ಕನ್ನಡಿದಿ ಸನ್ಮತಿಗೆ ಮಂಗಳವನಿತ್ತುಸಲಹೋ ॥

ಶ್ರೀ ಪೂರ್ಣ ಭೋಧಗುರುತೀರ್ಥಸುಪಯೋನಿಧಿಯ ।
ತಾಪಾರಗಂಡು ಸ್ಮರರಿಪುಮಾಕ್ಷವಿಷಮಾಂಬ-।
ಕಾ ಪಿನಾಕಿಯ ಶಿರವಸಾರಿ ಪೂರ್ವೋತ್ತರದ ಸಿದ್ಧಾಂತಮೆಂಬೂರ್ಮಿಯಾ ॥
ಆ ಪರಮಹಂಸಚಾರದಿ ದೇವಾಳಿಯಿಂ ಮ ।
ಹಾಪೂಜೆಯಿಂದ ಸೇವಿತನಾದ ಪರಮಾತ್ಮ।
ನಾ ಪಾದಪದ್ಮಗ್ರಳ ರಜವನ್ನು ಪ್ರಕ್ಷಾಲನಂ ಗೆಯ್ದು ಲಗ್ನವಾಗೀ ॥1 (ಅ)

ಪರಿಪೂರ್ಣಕಾಂತಿಯಿಂ ಬುಧಗೆ ಗುರುಜನಕನಾ ।
ಗಿರುವ ಶಶಿಗುದಿಸಲಾಸ್ಪದಕ್ಷೀರಶರಧಿಯೊಳು ।
ನೆರೆದು ಮಾರಾರಿಜ್ಞಾನಾಕ್ಷಮುಕ್ಕಣನ ಜಟಾಮುಕುಟಮಂ ಚುಂಬಿಸಿ ॥
ಚರಿಪಹಂಸಗಳೂ ಪೂರ್ವೋತ್ತರ ತರಂಗಗಳ ।

ನೆರವಿನಿಂ ದೇವಾಲಿಯಿಂದ ಸೇವಿತವಾದ।
ಪರಮಾತ್ಮನಂಘ್ರಿಕಮಲದೊಳುದಿಸಿ ಪ್ರಕ್ಷಾಲನಂ ಗೆಯ್ದು ಲಗ್ನವಾಗೀ ॥ 1 (ಬ)

ಜೀವೇಶ ಭೇದಗುಣಪೂರ್ಣತ್ವನೀಚೋಚ್ಚ।
ಭಾವದಿ ಜಗತ್ಸತ್ಯವೆಂಬ ಪ್ರಮುಖ ನ- ।
ಕ್ರಾವಳಿಸಮೇತದಿಂ ದುರ್ವಾದಿಕುಲಬಸ್ತಗಳ ನುಂಗಿ ಜೀರ್ಣಗೈದಾ
ಭೂವಲಯಕೆಲ್ಲ ಗುರುರಾಘವೇಂದ್ರಾರ್ಯ ವಾ-।
ಗ್ದೇವನದಿಸರ್ವದಾ ಭಕ್ತರಘಮಂ ಕಳೆದು।
ಪಾವನಂ ಗೆಯ್ದು ತಾಪತ್ರಯವ ಶಾಂತಿಯಂ ಮಾಡಿ ನಿರ್ಮಲವೆಸಗಲಿ ॥ 2(ಅ)

ಚರಿಪ ಜೀವಶ್ರೇಷ್ಠಭೇದನಂಗೆಯ್ದು ಗುಣ।
ಭರಿತಸತ್ವದಕಿರಿದು ಹಿರಿದಾದ ನಕ್ರಗಳು।
ಕುರುವದಿಂ ಸಂಚರಿಪಜಾಪತಿಗಳಂ ನುಂಗಿ ಭೋರ್ಗರೆದು ತ್ರಿಪಥದಲ್ಲಿ॥
ಪರಿದು ಪಾವನಗೆಯ್ದು ಗುರುರಾಘವೇಂದ್ರವಾ-।
ಕ್ಸುರತರಂಗಿಣಿ ಶರಣರನುತಾಪ ಪರಿಹರಿಸಿ।
ಶರಣುಸುಧೆಯನ್ನೆಸಗಿಜನ್ಮಾಂತರದದೋಷಮಂಕಳೆದು ನಿರ್ಮಲಗೆಯ್ಯಲಿ ॥ 2(ಬ)

ಯತಿವರ ಶ್ರೀರಾಘವೇಂದ್ರನೆ।
ಸತತ ಸಕಲೇಷ್ಟ ಪ್ರದಾಯಕ।
ನುತಿಸಿ ತವಪದಕುಂಜಯುಗದಲಿ ಭಕುತಿಮಾಳ್ಪವರಾ ॥
ಅತಿಶಯದ ದೋಷೌಘಪರ್ವತ।
ತತಿಯ ತರಿದೈ ದೃಷ್ಟಿವಜ್ರದಿ।
ಕ್ಷಿತಿಸುರೇಂದ್ರನೆ ಪೇರ್ಮೆಯಿಂದೆನ್ನನವರತ ಸಲಹೈ ॥ 3 ॥

ಹರಿಯ ಪದಪಂಕಜವ ಭಜಿಸಲು।
ದೊರೆವುದೈ ನಿನಗಖಿಳ ಸಂಪದ।
ಗುರುವೆ ನೀ ದೇವಸ್ವಭಾವನು ದಿಟ ಸುರದ್ರುಮದಾ॥
ತೆರದೊಳೆನ್ನಯ ಮನದಭೀಷ್ಟೆಯ।
ಕರುಣಿಸುವ ದಾತಾರನಾಗುತ।
ಪೊರೆದಪುದು ಶ್ರೀರಾಘವೇಂದ್ರನೆ ಸುಗುಣಮಂದಿರನೇ॥ 4 ॥

ಮೌನಿಮಣಿ ಭವ್ಯ ಸ್ವರೂಪನೆ।
ದೀನಜನ ಭವದುಃಖತೂಲವಿ-।
ತಾನಕಗ್ನಿಯಸಮನೆ ದುಸ್ತರವಾದುಪದ್ರವದಾ॥
ಹಾನಿಶರಧಿಗೆ ಸೇತುವೆನಿಸುತ।
ಹೀನದುಷ್ಟಗ್ರಹಸುನಿಗ್ರಹ।
ನೀನಲಾಸುಖಧೈರ್ಯಶಾಲಿಯು ಪಾಲಿಸುವುದೆಮ್ಮಾ॥ 5 ॥
ದೋಷರಹಿತನವದ್ಯ ನಿರ್ಮಲ।
ವೇಷನೇ ಪ್ರಾರ್ಥಿಸುವೆ ಜನರಭಿ-।
ಲಾಷೆ ಸಲಿಸುತ ಮೂಕರಿಂಗೆ ಸುಭಾಷೆ ಕರುಣಿಸುತ॥
ಶೇಷ ವಿದ್ವಜ್ಜನ ಮಹಾವಿ-।
ಶೇಷಗುಣಸ್ತುತಿಸುವರು ಮಂಗಳ।
ಶೇಷನಂ ಸೋಲಿಸುವ ವಚನವಿಲಾಸಕಭಿನಮಿಪೆ॥ 6 ॥

ಸಕಲಸಂಪದ್ಭಕ್ತಿಸಂತತ।
ಸುಕಲವಾದ್ಗೇಹದ ಸುಪಾಟವ।

ಭಕುತರಿಗೆ ವಿಜ್ಞಾನಸುಮ್ಮಾನಾದಿಗಳನಿತ್ತು॥
ಏಕಳಮತಿ ಕಾಯಜದಖಿಳಪಾ-।
ತಕವ ತರಿವುತ ಸಲಹೊ ಗುರುಗಳ।
ಮಕುಟಮಣಿ ಶ್ರೀರಾಘವೇಂದ್ರನೆ ಲೋಕಸುಂದರನೆ॥ 7॥

ಆವವನು ಪಾದೋದಕವ ಶಿರದಿ ಧರಿಸಿದರೆ।
ದೇವಗಂಗಾದ್ಯಖಿಲ ಮುಖ್ಯ ನದಿಗಳಲಿಸ-।
ದ್ಭಾವದಿಂ ಸ್ನಾನದಾನಂಗಳೆಸಗಿದ ಪುಣ್ಯಮಿತಪುಣ್ಯದಿಟದೊರೆವುದು॥
ಆ ವ್ಯಂಗಸ್ವಾಂಗಸಮೃದ್ಧಿಯಾಗಿ ತಾಪಪಾ-।
ಪಾವಲಿಗ್ರಹನಾಶ ಬಂಜೆಸುತರಂ ಪಡೆವ।
ಳೇಪೇಳ್ವೆ! ಶ್ರೀರಾಘವೇಂದ್ರಗುರುಗಳಮಹಿಮೆಪೊಗಳುತಾಶ್ರೈಸಿಭಜಿಪೆ॥ 8 ॥

ಆವವನಪದಕಂಜರಜದಿ ತನುಭೂಷಿತನೊ।
ಆವನಡಿದಾವರೆಯೊಳಳಿಯಂತೆ ಮನವಿಹುದೊ।
ಆವವನ ಚರಣಾಬ್ಜಕೀರ್ತನೆಗಳಿಂ ವಚನಪರಿಪಕ್ವಮಾಗೀಹದೋ॥
ಈ ವಿಧದೊಳಿಪ್ಪವನ ಸಂದರ್ಶನಂಗೆಯ್ಯೆ।
ದಾವ ಸಮವಲ್ಲವೆಂದುರಿತ ಕಾನನಕಿನ್ನು।
ದೇವಾಂಶಗುರುಗಳಂ ಪ್ರತ್ಯಕ್ಷಭಜಿಸುವನ ಬಣ್ಣಿಸುವರಾರ್ ಜಗದೊಳು॥ 9 ॥

ಧರೆಯೊಳಗೆ ವಿಜಯೀಂದ್ರ ಕರಕಮಲಸಂಜಾತ।
ಗುರುಸುಧೀಂದ್ರಾರ್ಯರಾವರಪುತ್ರರಾದ ಯತಿ।
ವರರಾಘವೇಂದ್ರನೆಂಬಭಿಧಾನದಿಂ ಕರೆಸಿ ಶ್ರೀಮಧ್ವಮತಪರ್ಚಿಸಿ॥

ಬಿರಿದು ಪಸರಿಸಿ ಸರ್ವತಂತ್ರ ಸ್ವತಂತ್ರರೆನೆ।
ಮೆರೆದ ಮಹಿಮನೆ ಪುತ್ರಸಂಪತ್ಕಳತ್ರಯಶ।
ಪರಮಾಯುಜ್ಞಾನಸದ್ಭಕ್ತಿಪುಣ್ಯಗಳಿತ್ತು ಹರಿಸಿ ನೀ ಸಲಹೊ ಎನ್ನ॥ 10-11)

ವಾದಿಗಳ ಜಯಶೀಲದಲಿ ಪ್ರತಿ।
ವಾದಿಗಳ ಸ್ವಾಂತ ಪ್ರಭೇಧನ।
ಗೆಯ್ದು ಚಂಚಲ ಮಾಳ್ಪ ಚಿಹ್ನೆಗೆ ಯರಡರಲಿ ಸತತ॥
ಆದರವು ಗುರುರಾಘವೇಂದ್ರಗೆ।
ಮೇದಿನಿಯೊಳನ್ಯೋರ್ವರೋರ್ವರು।
ಬೋಧಸರ್ವಸುವಿದ್ಯೆ ಕುಶಲೋನ್ನತಿ ಸುಗುಣದಲ್ಲಿ॥ 12 ॥

ಶ್ರೀಶನಪರೋಕ್ಷೀಕರಿಸಿ ಸಂ।
ನ್ಯಾಸವಿಷಯದಿ ಮಾಡಿ ಕಾಮನ।
ಪೂಶರವುಪೇಕ್ಷಿಸಿಜರಿದು ದೇಹಾದಿಮಮತೆಯನು॥
ಭೂಸುರೋತ್ತಮರಿಂಗಪೇಕ್ಷಿತ।
ರಾಶಿಫಲಗಳನೀವನಿಗೆ ಸಮ।
ವೀಶರಧಿ ಮೇಖಲೆಯೊಳಿಲ್ಲವೊ ರಾಘವೇಂದ್ರಂಗೆ ॥ 13 ॥

ಸದ್ದಯಾದಾಕ್ಷಿಣ್ಯ ವಿಷಯದಿ।
ಹೊದ್ದದಿಹವೈರಾಗ್ಯಭಾಗ್ಯ ಸು-।
ಬುದ್ಧಿವಾಕ್ಪಾಟವ ಮುಖಾಂಕಿತ ಸದ್ಗುಣಗಳಲ್ಲಿ॥
ಸಿದ್ಧಿಶಾಪಾನುಗ್ರಹದ ಪ್ರ-।

ಸಿದ್ಧಶಕ್ತಿಗಳಿಂದ ಶೋಭಿಸು ।
ತಿದ್ದ ಶ್ರೀಗುರುರಾಘವೇಂದ್ರರಿಗಿಲ್ಲ ಸಮನೋರ್ವ ॥ 14 ॥

ಕಪಟಕುಟಿಲಜ್ಞಾನವಿಸ್ಮೃತಿಭ್ರಾಂತಿಕ್ಷ-।
ಯಪಸ್ಮಾರತಂದ್ರಸಂಶಯವಚಃಕೌಂತ್ಯಬಾ।
ಧಿಪಕಂಪನಾದಿ ಪ್ರಮುಖೇಂದ್ರಿಯಗಳಿಂದುದಿಸಿದತಿ ದೋಷಸಂಘವೆಲ್ಲ॥
ಅಪರಿಮಿತಮಹಿಮ ಶ್ರೀರಾಘವೇಂದ್ರನೆ ನಿನ್ನ।
ಕೃಪೆಯಾಗಲವು ನಾಶವಾಗದಿರ್ದಪವೆ ರಾ ।
ಜಿಪ ದಿವ್ಯಸಾಕ್ಷಾತ್ಸ್ವರೂಪಮಂ ಕಂಡವಗೆ ದುರಿತದಟ್ಟುಳಿಯೆತಿಳಿಯೆ ॥ 15 ॥
ಶ್ರೀರಾಘವೇಂದ್ರಾಯ ನಮಃ ಎಂಬ ದಿವ್ಯಾಷ್ಟ।
ಸಾರಾಕ್ಷರದ ಮಂತ್ರದಿಂ ನಿತ್ಯಭಕ್ತಿಯಿಂ ।
ದಾರಾಧಿಸುತ ಜಪಿಸಿದವರಿಗಿಷ್ಟಾರ್ಥಕೈಸಾರುವದು ನಿಃಸಂಶಯಾ ॥
ಚಾರುತರ ಕೀರ್ತಿಯಿಂ ಶ್ರೀಮಧ್ವಮತಕ್ಷೀರ ।
ವಾರಿನಿಧಿ ಚಂದ್ರನೊಳ್ವೆಚ್ಚಿಸುತ ಲೋಕದೊಳು ।
ಸಾರಿಸಿದೆ ನಿರ್ದೋಷಗಮ್ಯಮಹಿಮನೆರಾಘವೇಂದ್ರಗುರುಸಾರ್ವಭೌಮಾ ॥ 16 ॥
ತನ್ನ ಕಾಯಜ ದೋಷಯಾತ್ಮವಾತ್ಮೀಯಭವ ।
ಘನ್ನ ಪಾಪಂಗಳಂ ಸರ್ವದುರಿತಂಗಳಂ ।
ಚನ್ನಾಗಿ ಪರಿಹರಿಸಿ ಪುರುಷಾರ್ಥಕೊಡುವಪರಮಾತ್ಮವಿದನೀತನೆಂದು ॥ 17 ॥
ಮನ್ನಿಸಿ ತ್ರಿಕಾಲದೊಳಜಸ್ರಪ್ರಾರ್ಥನೆಗೆಯ್ವ ।
ಧನ್ಯನಾವನೊ ಅವನು ಸರ್ವೇಷ್ಟಪಡೆದು ಸುಖ ।
ವನ್ನೆ ಭೋಗಿಸುವನಿಹಪರದೊಳಗೆಸಂದೇಹಮಿಲ್ಲದಕೆಸುಗತಿಸಾರ್ವಾ ॥ 18-19 ॥

ಸಕಲಯಾತ್ರಾಫಲದಗೋಸ್ಕರ।
ಸುಕಲೆವೃಂದಾವನಪ್ರದಕ್ಷಿಣೆ।
ಶಕುತಿಯಿದ್ದಷ್ಟೆಸಗುವೆನು ಸರ್ವೇಷ್ಟಸಿದ್ಧಿಂಗೆ॥
ಭಕುತಿಯಿಂ ನಮಸ್ಕಾರ ಮಾಳ್ಪೆನು।
ಯುಕುತಿಶ್ರುತಿಸ್ಮಾರ್ತ್ಥಜ್ಞಾನದ।
ನಿಕರ ಕೈಸಾರ್ವದಕೆ ತವ ಸಂಕೀರ್ತನಂ ಗೆಯ್ವಾ ॥ 20 ॥

ಭುವನದೊಳಗಿದ್ದಖಿಳತೀರ್ಥದ।
ನಿವಹದೊಳು ಮಜ್ಜನವನೆಸಗಿದ।
ಸವೆಯದತಿಫಲದೊರೆವುದಕೆ ವೃಂದಾವನಭಿಷೇಕಾ ॥
ಸ್ತವನದಿಂ ಎಸಗಿರಲು ತಜ್ಜಲ।
ವವಯವದಿ ಶಿರದಲ್ಲಿ ಧರಿಸುವೆ।
ತವಮಹಾತ್ಮ್ಯವಿಚಿತ್ರವೈಗುರುರಾಜಸುರಭೂಜಾ ॥ 21 ॥

ಕಾಮಾದಿಭಂಗ ಸಂಕುಲದಿಂದ ವಿಷಯ ಸು।
ಪ್ರೇಮವಿಭ್ರಮ ದುರ್ಭ್ರಮಗಳಿಂದವದ್ಯಗ್ರಹ।
ಸ್ತೋಮದಿಂದಮಿತಭಯವೆಂಬ ಫೇನಗಳಿಂದ ಉತ್ಕೃಷ್ಟದುಃಖವಿಷಧೀ ॥
ಆಮಹಾಕ್ಷಯಪ್ರಕೃತಿಬದ್ಧದುಸ್ತರಸದಾ।
ಸೀಮವರ್ಜಿತವಾದಗಾಧ ಸಂಸಾರವೆಂ-।
ಭೀಮಹಾರ್ಣವದೊಳಗೆಮಗ್ನನಾಗಿದ್ದೆನ್ನನುದ್ಧರಿಸೊ ರಾಘವೇಂದ್ರಾ ॥ 22 ॥

ಶ್ರೀರಾಘವೇಂದ್ರ ಗುರುಸ್ತೋತ್ರಮಂಭಕ್ತಿಯಿಂ ।
ದಾರಾದೊಡಂಪಠಿಸಿಜಪಿಸಿದರೆ ಕುಷ್ಠಾದಿ ।
ಕ್ರೂರರೋಗಗಳಳಿವವತಿತ್ವರ್ಯದಿಂದಂಧಜಪಿಸಿದರೆ ದಿವ್ಯದೃಷ್ಟಿ॥
ಸಾರುವನವಂ ಏಡಮೂಕಾದರುಂ ಸರಿಯೆ ।
ಸಾರಸ್ತೋತ್ರದಿ ಜಪಂಗೆಯ್ಸ ವಾಕ್ಪತಿಯಂತೆ ।
ಚಾರುವಾಚಾಲನಾಗುವಸ್ತುತಿಯಪಠಿಸಿದವ ಪೂರ್ಣಾಯುಸಿರಿತಾಳ್ವನು ॥ 23-24 ॥

ಆವನೀಸ್ತೋತ್ರದಿಂದಭಿಮಂತ್ರಿತೋದಕವ ।
ಭಾವಶುದ್ಧಿಕುಡಿಯಲವನ ಕುಕ್ಷಿಯೊಳಿರ್ದ-।
ಘಾವಳಿಗಳೆಲ್ಲ ತಕ್ಷಣದೊಳಳಿವವುಯಿನ್ನುಪೊಳೆವ ವೃಂದಾವನವನು ॥
ಸೇವಿಸೆಪ್ರದಕ್ಷಿಣೆಯ ಪಂಗುಖಂಜಗಳನಿಬ ।
ರಾವಿಮಲಸ್ತೋತ್ರದಿಂದೆಸಗೆ ಜಂಘಾಲಾಗಿ ।
ತಾವೆಚರಿಸುವರು ಶ್ರೀರಾಘವೇಂದ್ರಾರ್ಯರಮಹಾಪ್ರಸಾದವಪೊಗಳುತಾ ॥ 25-26 ॥
ಸೋಮಸೂರ್ಯಗ್ರಹಣದಲ್ಲಿ ಪುಷ್ಯಾರ್ಕಾದಿ ।
ರಾಮಣೀಯಕ ಪುಣ್ಯಪರ್ವಣಿ ಸಮಾಗಮದೊ ।
ಳೀಮಹಾದಿವ್ಯಸ್ತೋತ್ರವನು ನೂರೆಂಟುಬಾರೆಜಪಿಸಿದ ಮಾನವನಿಗೆ ॥
. . . . . . . . . . . . . . . .ಭೂತಪ್ರೇತಾದಿಭಯಪೀಡೆ ।
ತಾಮಸರುಪ್ರದವವೆಂದೆಂದುಬಾರದೆಪೋಪವೇವೇಳ್ವೆ! ಗುರಮಹಿಮೆಯಾ ॥ 27 ॥

ಈ ದಿವ್ಯಸ್ತೋತ್ರವುಚ್ಚರಿಸುತ್ತ ಮುಖದಿಗುರು ।
ಪಾದವನ್ನೆನೆದು ತದ್ವೃಂದಾವನದ ಬಳಿಯೊ ।
ಳಾದರದಿ ದೀಪಸಂಯೋಜನಂಗೆಯ್ದರ್ಗೆಸುಜ್ಞಾನಪುತ್ರಲಾಭಾ ॥ 28 ॥

ವಾದಿಗಳ ಜಯ ಭಕ್ತಿಹರಿಗುರುಗಳಲಿ ಪೆಚ್ಚಿ।
ಮೊದತೀರ್ಥರಮತವ ಪೊಂದಿದವರಿಗೆ ಸತತ।
ಭೋದೇವಮೌಳಿಮಣಿ ಸಕಲಭೀಷ್ಟೆಯನೀವ ಸಂದೇಹಮಿನಿತಿಲ್ಲವು ॥
ಚಾಮೂರ ಚೋರಸರ್ಪಗ್ರಹಪಿಶಾಚಿ ನೃಪ।
. . . . . . . . . . . . . . . . . . . . . . . . . . . . . .
ತಾಮಸರುಪದ್ರವೆಂದೆಂದು ಬಾರದೆ ಪೋಪವೇವೇಳ್ವೆ ! ಗುರುಮಹಿಮೆಯಾ ॥ 29-30 ॥
ಆವನತಿಭಕ್ತಿಯಿಂ ಗುರುರಾಘವೇಂದ್ರರಡಿ।
ದಾವರೆಯ ಸ್ತೋತ್ರಮಂ ಪಠಿಸುತ್ತ ಸ್ಮರಿಸಲು ಸು।
ಖಾವಳಿಯ ಹೊಂದುವನು ಲೇಶ ಕಮಲಾನಾಥನಮಲಪ್ರಸಾದಿಂದ ॥
ಶ್ರೀವಿಭೂತೀಕೀರ್ತಿದಿಗ್ವಿಜಯ ಮೊದಲಾದ।
ಈ ವಿಶೇಷಾರ್ಥಸಮೃದ್ಧಿಯಂ ಪಡೆವುದಕೆ।
ದೇವೇಶಶ್ರೀಹಯಾಸ್ಯನೆ ಸಾಕ್ಷಿ ನಾ ನುಡಿವೆ ಕೇಳ್ವುದೆಲ್ಲಾಸುಜನರು ॥ 31-32 ॥

ಸುರಮಹೀರುಹಭಕ್ತಿಯಿಂ ಭಜಿಸುವರ್ಗಮರ।
ಸುರಭಿನಮಿಪರ್ಗೆ ವರಸತ್ಯಧರ್ಮಾಸಕ್ತ।
ಧರೆಯೊಳತಿಪೂಜ್ಯ ಶ್ರೀರಾಘವೇಂದ್ರರ ನಾಮನಿರ್ವಚನಮಂ ಪೇಳುವೆ ॥

ವೃಂದಾವನದೊಳಿರ್ಪ ಮೃತ್ತಿಕೆಯನನುದಿನದಿ।
ತಂದು ಸೇವಿಸಲವನ ಮುಟ್ಟಲರಿಯವು ಪಾಪ।
ವೆಂದು ರೋಗಿಷ್ಠಸಾಧಿಸುತ ಲೇಪಿಸೆ ಮೆಯ್ಗೆಕುಂದಣದ ತೆರನಾಗುವಾ ॥
ವೃಂದಾರಕರಮಣಿಯೊಳೀಪ್ಸಿತವನೀವುದಿ।
ನ್ನೆಂತು ಬಣ್ಣಿಸಲಿ ಮಂತ್ರಾಕ್ಷತೆಯ ಮಹಿಮೆ ನಾ।

ಹಿಂದೆಮುಂದೆಂದುಗುರುರಾಘವೇಂದ್ರಾರ್ಯರಿಗೆಸಮವಿಲ್ಲಲೋಕದಲ್ಲಿ ॥

ಈ ತೆರದಿ ಗುರುರಾಘವೇಂದ್ರಪ್ರಸಾದದಿಂ ।

ಪ್ರೀತಿಯಿಂದಪ್ಪಣಾಚಾರ್ಯರೆಂಬಭಿಧಾನಾ।

ಖ್ಯಾತರಿಂ ಗೀರ್ವಾಣದಿಂದ ರಚಿಸಲವರಭಾವಮಂ ಕನ್ನಡದಲೀ ॥

ಜ್ಯೋತಿಕನ್ನಡಿಯೊಳಗೆ ಮುಖಸ್ಪಷ್ಟ ಕಾಣಿಸುವ ।

ರೀತಿಯಿಂ ಗ್ರಹಿಸಿ ಶ್ರೀಮನೋಹರವಿಠಲದಾಸ ।

ಚಾತುರ್ಯದಿಂ ಪೇಳ್ವನೆಂದರಿದು ಬರೆದೋದಿ ಕೇಳ್ವುದೆಲ್ಲಾ ಸುಜನರೂ ॥

॥ ಇತಿ ಶ್ರೀಗುರುರಾಘವೇಂದ್ರಸ್ತೋತ್ರಂ ಸಂಪೂರ್ಣಂ ॥

॥ ಶ್ರೀ ಮನೋಹರವಿಠಲದಾಸಾಂತರ್ಗತ ಶ್ರೀಜಗನ್ನಾಥದಾಸಗುರ್ವಾಂತರ್ಗತ

ಶ್ರೀರಾಘವೇಂದ್ರತೀರ್ಥಗುರ್ವಾಂತರ್ಗತ ಶ್ರೀವಾದಿರಾಜಗುರ್ವಾಂತರ್ಗತ

ಶ್ರೀಮಧ್ವೇಶಾರ್ಪಣಮಸ್ತು ॥